

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363

Vol. : 9 Issue : 4 Month - September 5124/ ಶುಭಕೃತ್ ಸಂವತ್ಸರ ಸಪ್ಟೆಂಬರ್ 2022 ಪುಟ 12 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24


# ಸ್ವಾತಂತ್ರ್ಯ ಅಮೃತ ಮಹೋತ್ಸವ

## ಅಮೃತ ಶೋಭಾಯಾತ್ರೆ

12.08.2022,

ಅಮೃತ ಮಹೋತ್ಸವದ ಅಂಗವಾಗಿ ನಡೆದ ಅಮೃತ ಶೋಭಾಯಾತ್ರೆಯ ಉದ್ಘಾಟನೆಯನ್ನು ಬೃಹತ್ ಗಾತ್ರದ ಧ್ವಜಾರೋಹಣದ ಮೂಲಕ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ರಾಜೇಶ್ ನ್ಾಯಕ್ ನೆರವೇರಿಸಿದರು. ಹಿರಿಯರಾದ ಡಾ. ಪ್ರಭಾಕರ ಭಟ್ ಶೋಭಾಯಾತ್ರೆಗೆ ಚಾಲನೆ ನೀಡಿದರು.



15.08.2022





- 9x12 ಅಡಿ ರಾಷ್ಟ್ರಧ್ವಜ
- 42 ಅಡಿ ಎತ್ತರದ ಧ್ವಜಸ್ತಂಭ
- ರಾಷ್ಟ್ರಭಕ್ತ ಮಹಾಪುರುಷರ ಸ್ತಬ್ಧಚಿತ್ರಗಳು
- ಸ್ವಾತಂತ್ರ್ಯ ದಿನಾಚರಣೆಯಂದು ವಿದ್ಯಾರ್ಥಿಗಳಿಂದ 75 ರಚನೆ
- 3750 ಮಂದಿ ಧ್ವಜವಂದನಾ ಹಾಗೂ ಶೋಭಾಯಾತ್ರೆಯಲ್ಲಿ ಭಾಗಿ
- ಶೋಭಾಯಾತ್ರೆಯಲ್ಲಿ ಜೊತೆಗೂಡಿದ ಸಾರ್ವಜನಿಕರು, ಪೋಷಕರು
- ದೇಶಭಕ್ತಿಗೀತೆ, ಘೋಷಣೆಗಳೊಂದಿಗೆ 4ಕಿ.ಮೀ ಸಾಗಿ ಬಂದ ಪ್ರಭಾತ್ ಫೇರಿ

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಹರ್ ಘರ್ ತಿರಂಗಾ ಕರೆಯ ಮೇರೆಗೆ ವಿದ್ಯಾಸಂಸ್ಥೆಗೆ ಸಂಬಂಧಿಸಿದ 3750+ ಮನೆಮನೆಗಳಲ್ಲರಳಿದ ತ್ರಿವರ್ಣ ಧ್ವಜ.



## ಶಿಶುಮಂದಿರ



**ಪಾಲಕರ ಸಭೆ 09.08.2022**

ಪಾಲಕರ ಸಭೆಯಲ್ಲಿ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಡಾ। ಪ್ರಭಾಕರ್ ಭಟ್ ಮಾರ್ಗದರ್ಶನ ಮಾಡಿದರು ವಿದ್ಯಾಕೇಂದ್ರದ ಅಧ್ಯಕ್ಷರು ಸಂಚಾಲಕರು ಉಪಸ್ಥಿತರಿದ್ದರು. 11 ಜೋಡಿ ದಂಪತಿಗಳು ಸೇರಿ 150 ಜನ ಭಾಗವಹಿಸಿದ್ದರು.



**ಪಾಲಕರ ಕಾರ್ಯಾಗಾರ 20.08.2022**

ಶಿಶುಮಂದಿರದ ಪಾಲಕರಿಗಾಗಿ ನಡೆದ ಕಾರ್ಯಾಗಾರದಲ್ಲಿ 66 ಮಂದಿ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕಿಯಾದ ಶ್ರೀಮತಿ ಶೋಭಾ ಮಾತಾಜಿ ಕಾರ್ಯಾಗಾರ ನಡೆಸಿಕೊಟ್ಟರು. ನಂತರ ನಡೆದ ಅಭಿವೃದ್ಧಿ ಸಮಿತಿ ಬೈಠಕ್‌ನಲ್ಲಿ ಡಾ। ಪ್ರಭಾಕರ್ ಭಟ್ ಮಾರ್ಗದರ್ಶನ ಮಾಡಿದರು.



**ಪೂರ್ವ ತಯಾರಿ ಬೈಠಕ್ 23.08.2022**

ನವದಂಪತಿ ಸಮಾವೇಶದ ಪೂರ್ವತಯಾರಿ ಬೈಠಕ್‌ನಲ್ಲಿ ಡಾ। ಪ್ರಭಾಕರ್ ಭಟ್ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ–ದರು. ವಿದ್ಯಾಕೇಂದ್ರದ ಅಧ್ಯಕ್ಷರು, ಸಂಚಾಲಕರು, ಸಹಸಂಚಾಲಕರು ಉಪಸ್ಥಿತರಿದ್ದರು. 32 ಮಾತೆಯರು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



**ಆಟಿದ ಗೊಬ್ಬು : 4.8.2022**

ಆಟಿ ತಿಂಗಳಿನ ಆಟಗಳಾದ ಚೆನ್ನೆಮಣೆ, ತುಳು ಎದುರುಕತೆ, ಗಾದೆ ಮತ್ತು ಕಬಿತೆ ಹೇಳಿಕೊಟ್ಟರು. ಊರಿನ ಹಿರಿಯರಾದ ಹಾಗೂ ಚೆನ್ನೆಮಣೆ ಆಟ ಪ್ರವೀಣೆ ಜಯಂತಿ ಕುರ್ಮಾನ್, ಬೇಬಿ ಕುರ್ಮಾನ್ ಉಪಸ್ಥಿತರಿದ್ದರು.



**ಜಿಲ್ಲಾಮಟ್ಟದ ಈಜು ಸ್ಪರ್ಧೆ : 8.8.2022**

ವಿದ್ಯಾಭಾರತಿ ದ.ಕ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ 7ನೇ ತರಗತಿಯ ಅನರ್ಘ್ಯ ಬ್ಯಾಕ್‌ಸ್ಟ್ರೋಕ್ 100ಮೀ. ದ್ವಿತೀಯ, 50ಮೀ ತೃತೀಯ, 50 ಮೀ ಫ್ರಿ ಸ್ಟೈಲ್‌ನಲ್ಲಿ ತೃತೀಯ ಸ್ಥಾನ ಪಡೆದು ಪ್ರಾಂತ ಮಟ್ಟಕ್ಕೆ ಆಯ್ಕೆ.



**ಪೋಷಕರ ಸಭೆ: 17.8.22** ಪೂರ್ವ ಪ್ರಾಥಮಿಕ, ಹಿರಿಯ ವಿಭಾಗದ ಪೋಷಕರ ಸಭೆಯು 2 ಹಂತಗಳಲ್ಲಿ ನಡೆಯಿತು. ಪೋಷಕರ ಅಭಿಪ್ರಾಯ ಪಡೆದ ಬಳಿಕ ಡಾ। ಪ್ರಭಾಕರ್ ಭಟ್ ಮಾರ್ಗದರ್ಶನ ಮಾಡಿದರು. ಅಧ್ಯಕ್ಷರು, ಸಂಚಾಲಕರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ಜಿಲ್ಲಾಮಟ್ಟದ ಜ್ಞಾನ ವಿಜ್ಞಾನ ಮೇಳ : 26.8.2022**

ವಿದ್ಯಾಭಾರತಿ ಕರ್ನಾಟಕ ವತಿಯಿಂದ ನಡೆದ ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ 7 ಪ್ರಥಮ ಸ್ಥಾನ, 5 ದ್ವಿತೀಯ ಸ್ಥಾನ ಹಾಗೂ 3 ತೃತೀಯ ಸ್ಥಾನ ಪಡೆದು ಒಟ್ಟು 15 ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.




**ಸಂಸ್ಕೃತ ಸಪ್ತಾಹ : 8.8.2022 ರಿಂದ 13.8.2022**

ದೇವಾಲಯೇ, ಕ್ರೀಡಾಂಗಣೇ, ವಿಪಣ್ಯೇ, ಉಪಾಹಾರ ಮಂದಿರೇ, ವೈದ್ಯಾಲಯೇ ಸಂಸ್ಕೃತಂ ಎಂಬ ಪರಿಕಲ್ಪನೆಯಲ್ಲಿ ಈ ಬಾರಿಯ ಸಂಸ್ಕೃತ ಸಪ್ತಾಹವನ್ನು ವಿಶೇಷವಾಗಿ ಆಚರಿಸಲಾಯಿತು. ಶ್ರೀಮತಿ ಅನ್ನಪೂರ್ಣಾ ನೇತೃತ್ವ ವಹಿಸಿದರು.




**ತಾಲೂಕು ಮಟ್ಟಕ್ಕೆ ಆಯ್ಕೆ : 8.8.2022**

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನೇರಳಕಟ್ಟೆ ಶಾಲೆಯಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ವಾಲಿಬಾಲ್ ಕಬಡ್ಡಿ ಪಂದ್ಯಾಟದಲ್ಲಿ ದ್ವಿತೀಯ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಪ್ರೌಢಶಾಲೆ



**ವಾಲಿಬಾಲ್ ಪಂದ್ಯದಲ್ಲಿ ದ್ವಿತೀಯ ಸ್ಥಾನ 4.8.22**

ವಿದ್ಯಾಭಾರತಿ ದಕ್ಷಿಣಕನ್ನಡ ಜಿಲ್ಲಾಮಟ್ಟದ ವಾಲಿಬಾಲ್ ಪಂದ್ಯಾಟ ಸರಸ್ವತಿ ವಿದ್ಯಾಲಯ ಮುಂಡಾಜೆಯಲ್ಲಿ ಜರುಗಿತು. ಹದಿನೇಳರ ವಯೋಮಾನದ ಬಾಲಕರು ದ್ವಿತೀಯ ಪ್ರಶಸ್ತಿಯನ್ನು ಪಡೆದರು.



**ಕೃಷಿ ಕೆಲಸದಲ್ಲಿ ವಿದ್ಯಾರ್ಥಿಗಳು 09.08.22**

ಸುಧೆಕಾರಿನಲ್ಲಿರುವ ಗದ್ದೆಯಲ್ಲಿ ಕೃಷಿ ಕಾರ್ಯದಲ್ಲಿ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡರು. ಈ ಬಾರಿಯ ಕೃಷಿ ಚಟುವಟಿಯನ್ನು ಪರಿಸರ ಹಾಗೂ ಕೃಷಿ ಸಂಘ ನಿರ್ವಹಿಸುತ್ತಿದೆ.



**ಖೋ–ಖೋ ಪಂದ್ಯಾಟದಲ್ಲಿ ತಾಲೂಕು ಮಟ್ಟಕ್ಕೆ ಆಯ್ಕೆ 20.08.2022**

ಕಲ್ಲಡ್ಕ ವಲಯ ಮಟ್ಟದ ಖೋ–ಖೋ ಪಂದ್ಯಾಟದಲ್ಲಿ ಪ್ರೌಢಶಾಲೆಯ ಬಾಲಕರ ತಂಡ ದ್ವಿತೀಯ ಪ್ರಶಸ್ತಿಯನ್ನು ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದೆ.

# ಸುಭಾಷಿತ ಮಂಜರಿ

**ವಿಜ್ಞಾನ ಗುಣಮಹಾರ್ಘೇ**
**ಪುರುಷೇ ದ್ವೇಷ್ಯತ್ವಮಪಿ ರಮಣೀಯಂ ।**
**ಜನನಿಂದಿತೇ ಪುನರ್ಜನೇ**
**ಪ್ರಿಯತ್ವೇನಾಪಿ ಲಜ್ಜಾಮಹೇ ॥**

**ಉತ್ತಮವಾದ ವಿದ್ಯೆ, ಗುಣ ಇವುಗಳಿಂದ ಶ್ರೇಷ್ಠನಾದವನೊಡನೆ ಹಗೆತನವೂ ಸುಂದರವಾಗಿರುತ್ತದೆ. ಆದರೆ ಎಲ್ಲರಿಂದಲೂ ನಿಂದಿತನಾದವನೊಡನೆ ಗೆಳೆತನವು ನಾಚಿಕೆಗೇಡು.**

**ಸಂಪಾದಕೀಯ**

ಆತ್ಮೀಯ ಓದುಗರೆ,

ಆಗೋಸ್ಟ್ ತಿಂಗಳ ಈ ಸಂಚಿಕೆ ಹಲವು ವೈವಿಧ್ಯಮಯ ವಿಷಯಗಳೊಂದಿಗೆ ಪ್ರಕಟಗೊಳ್ಳುತ್ತಿದೆ. ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿ ಇದೇ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿ ನೇಮಕಗೊಳ್ಳುತ್ತಿರುವುದು ಉಲ್ಲೇಖನೀಯ ವಿಷಯ. ಇದುವರೆಗೆ ಕೇವಲ ಎಂಟು ಪುಟಗಳಿಗೆ ಸೀಮಿತವಾಗುತ್ತಿದ್ದ ಸರಯೂ ಈ ಬಾರಿ ಭರಪೂರ ಕಾರ್ಯಕ್ರಮಗಳ ಕಾರಣಕ್ಕೆ ತನ್ನ ಗಾತ್ರವನ್ನು ಹೆಚ್ಚಿಸಿಕೊಂಡಿದ್ದು ಎರಡನೇ ವಿಶೇಷವಾಗಿದೆ. ಆಜಾದಿ ಕಾ ಅಮೃತ ಮಹೋತ್ಸವವು ಒಂದು ಹಂತವನ್ನು ಪೂರೈಸಿ ಮುಂದಿನ 25 ವರ್ಷಗಳಲ್ಲಿ ನಮ್ಮ ಜವಾಬ್ದಾರಿ ಏನೆಂಬುದನ್ನು ನೆನಪಿಸಿ ಕೊಡುವ ಹರ್ ಘರ್ ತಿರಂಗಾ ಪರಿಣಾಮಕಾರಿಯಾಗಿ ಸಂಸ್ಥೆಯ ವಿದ್ಯಾರ್ಥಿಗಳೆಲ್ಲರ ಮನೆಯಲ್ಲಿ ಮನದಲ್ಲಿ ಅಚ್ಚಳಿಯದೇ ನಿಂತಿರುವುದು ಮತ್ತೊಂದು ವಿಶೇಷ. ಇದರೊಂದಿಗೆ ಎಂದಿನಂತೆ ಉಳಿದೆಲ್ಲಾ ಕಾರ್ಯಕ್ರಮಗಳ ವರದಿಯೊಂದಿಗಿನ ಸರಯೂ ನಿಮ್ಮ ಮುಂದಿದೆ.

ಸಂಪಾದಕ ಬಳಗ


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ಶ್ವೇತಾ (ಸೆಕೆಂಡರಿ ಸ್ಕೂಲ್)
ಗೋವಿಂದ ನಾರಾಯಣ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


## ಪ್ರೌಢಶಾಲೆಯ ನೂತನ ಮುಖ್ಯೋಪಾಧ್ಯಾಯರಾಗಿ ಶ್ರೀ ಗೋಪಾಲ ಎಂ.



ದಿನಾಂಕ 01.08.2022 ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ ಇಲ್ಲಿನ ನೂತನ ಮುಖ್ಯೋಪಾಧ್ಯಾಯರಾಗಿ ಶ್ರೀ ಗೋಪಾಲ ಎಂ. ಇವರು ಜವಾಬ್ದಾರಿ ವಹಿಸಿಕೊಂಡರು. ಇವರು ಅಮ್ಟೂರು ಗ್ರಾಮದವರಾಗಿದ್ದು, ಈ ಪ್ರೌಢಶಾಲೆಯ ಮೊದಲ ತಂಡದ ವಿದ್ಯಾರ್ಥಿಯಾಗಿದ್ದಾರೆ. ಕಳೆದ 31 ವರ್ಷಗಳಿಂದ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸಿ ಇದೀಗ ಮುಖ್ಯೋಪಾಧ್ಯಾಯರಾಗಿದ್ದಾರೆ.

ಹಿರಿಯರ ಸಮ್ಮುಖದಲ್ಲಿ ನಿರ್ಗಮಿತ ಮುಖ್ಯೋಪಾಧ್ಯಾಯರು ಶ್ರೀಮತಿ ಶಾಂಭವಿ ಮಾತಾಜಿ ಇವರು ಜವಾಬ್ದಾರಿ ಹಸ್ತಾಂತರಿಸಿದರು. ಸಂಸ್ಥೆಯ ಹಿರಿಯರಾದ ಡಾ. ಪ್ರಭಾಕರ ಭಟ್ ತಿಲಕವಿಟ್ಟು ಶುಭ ಹಾರೈಸಿದರು. ಸಂಚಾಲಕರು, ಸಹಸಂಚಾಲಕರು, ಆಡಳಿತ ಮಂಡಳಿ ಸದಸ್ಯರು, ವಿಭಾಗ ಪ್ರಮುಖರು, ಶಿಕ್ಷಕರು, ಶಿಕ್ಷಕೇತರರು ಉಪಸ್ಥಿತರಿದ್ದು ಅಭಿನಂದಿಸಿದರು.

## ಪ್ರೌಢಶಾಲೆಗೆ ಆಡಳಿತಾಧಿಕಾರಿಯಾಗಿ ಶ್ರೀಮತಿ ಶಾಂಭವಿ



**ಶ್ರೀರಾಮ ಪ್ರೌಢಶಾಲೆಯಲ್ಲಿ ಕಳೆದ 33 ವರ್ಷಗಳಿಂದ ಶಿಕ್ಷಕರಾಗಿ ನಂತರ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದ ಶ್ರೀಮತಿ ಶಾಂಭವಿ ಇವರು 31.07.2022ರಂದು ನಿವೃತ್ತರಾದರು. ಇವರನ್ನು ಸಂಸ್ಥೆಯ ಹಿರಿಯರು ದಿನಾಂಕ 1.8.2022ರಿಂದ ಪ್ರೌಢಶಾಲೆಗೆ ಆಡಳಿತ ಅಧಿಕಾರಿಯಾಗಿ ನಿಯೋಜಿಸಿದರು.**

## ಪ್ರಾಥಮಿಕ ಶಾಲೆಯ ಸಂಪ್(ಮಳೆ ನೀರು ಸಂಗ್ರಹಾಗಾರ)ಉದ್ಘಾಟನೆ : 26.8.2022



ಪ್ರಾಥಮಿಕ ಶಾಲಾ ವಿಭಾಗದಲ್ಲಿ ಮಳೆನೀರನ್ನು ಸಂಗ್ರಹಿಸುವ ಸಲುವಾಗಿ ನಿರ್ಮಿಸಲಾದ 1.20ಲಕ್ಷ ಲೀಟರ್ ನೀರಿನ ಸಾಮರ್ಥ್ಯದ ನೆಲದಡಿಯ ಟ್ಯಾಂಕ್ (ಸಂಪ್)ನ್ನು ಉದ್ಘಾಟಿಸಲಾಯಿತು. ಏಳು ನದಿಗಳ ಪ್ರತೀಕವಾಗಿ ಏಳು ಕಲಶಗಳಲ್ಲಿನ ನೀರನ್ನು ಸಂಪ್‌ಗೆ ಸುರಿದು ಏಳು ಜನ ಅತಿಥಿಗಳು ಉದ್ಘಾಟಿಸಿದರು. (ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಕ್ಯಾ. ಮಣಿವಣ್ಣನ್ ಐ.ಎ.ಎಸ್., ಡಾ.ಸುಧಾಕರ್ ಶೆಟ್ಟಿ, ಶ್ರೀ ಸುನೀಲ್ ನ್ಯಾಕ್ ಶ್ರೀ.ಕೆ.ಮೋಹನ್ ಕುಮಾರ್, ಶ್ರೀಮತಿ ರಶ್ಮಿ, ಶ್ರೀ ಸುಮುಖ್ ಬೆಟಗೇರಿ ಶ್ರೀ ಬಾಲಕೃಷ್ಣ ಭಂಡಾರಿ)

## ಆಶಾಕಾರ್ಯಕರ್ತೆಯರೊಂದಿಗೆ ರಕ್ಷಾಬಂಧನ ಆಚರಣೆ : 12.8.2022




ಶ್ರೀರಾಮ ಪ್ರಾಥಮಿಕ ಶಾಲೆಯಲ್ಲಿ ರಕ್ಷಾ ಬಂಧನ ಕಾರ್ಯಕ್ರಮವನ್ನು ಆರೋಗ್ಯ ಇಲಾಖೆಯ "ಆಶಾ ಕಾರ್ಯಕರ್ತೆಯರೊಂದಿಗೆ ಆಚರಿಸಲಾಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ರಕ್ಷಾಬಂಧನದ ಮಹತ್ವ ತಿಳಿಸಿದರು. ವಿದ್ಯಾರ್ಥಿಗಳು ಅತಿಥಿಗಳಿಗೆ ರಕ್ಷಾಧಾರಣೆ ಮಾಡಿದರು. ಕೊರೋನಾ ಸಂದರ್ಭದಲ್ಲಿ ಜೀವ ಭಯವನ್ನು ತೊರೆದು ಇತರರ ಪ್ರಾಣವನ್ನು ರಕ್ಷಿಸಲು ಸ್ವಾರ್ಥ ಚಿಂತನೆ ಇಲ್ಲದೆ ತಮ್ಮನ್ನು ತಾವು ಉದಾತ್ತ ಕಾರ್ಯದಲ್ಲಿ ತೊಡಗಿಸಿಕೊಂಡ ಕೋರೋನ ವಾರಿಯರ್ಸ್‌ಗಳಾದ ಆಶಾಕಾರ್ಯಕರ್ತೆಯರಿಗೆ, ಮಡಿಲು ತುಂಬಿಸಿ, ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು.



**ಶ್ರೀರಾಮ ಶಿಶುಮಂದಿರ – ರಕ್ಷಾಬಂಧನ 12.08.2022:** ನಿವೃತ್ತ ಪ್ರಾಂಶುಪಾಲರಾದ ಶ್ರೀ ಮಹೇಶ್ವರ ಭಟ್ ರಕ್ಷಾಬಂಧನದ ಮಹತ್ವವನ್ನು ಮಕ್ಕಳಿಗೆ ಕಥೆಯ ಮೂಲಕ ತಿಳಿಸಿದರು.

## ವರಮಹಾಲಕ್ಷ್ಮೀ ಪೂಜೆ 5.8.2022



ಶ್ರೀರಾಮ ಶಿಶುಮಂದಿರದ ವತಿಯಿಂದ ವಿವಿದೆಡೆಗಳಲ್ಲಿ ವರಮಹಾಲಕ್ಷ್ಮೀ ಪೂಜೆ ಆಚರಿಲ್ಪಟ್ಟಿತ್ತು. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮುಲಾರು ಇಲ್ಲಿ ಪ್ರಾಥಮಿಕ ಶಾಲೆಯ ಸಂಸ್ಕೃತ ಅಧ್ಯಾಪಕಿ ಶ್ರೀಮತಿ ಅನ್ನಪೂರ್ಣಾ ಮಾತಾಜಿ, ಶಾರದಾಂಬಾ ಭಜನಾ ಮಂದಿರ ವೀರಕಂಬದಲ್ಲಿ ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮೀ ಮಾತಾಜಿ ದಿನದ ಮಹತ್ವ ತಿಳಿಸಿದರು. ಇದಲ್ಲದೇ 'ಕಲಾಶ್ರಯ ಕಶೆಕೋಡಿಯಲ್ಲಿ ವರಮಹಾಲಕ್ಷ್ಮೀ ಪೂಜೆ ಹಾಗೂ ರಕ್ಷಾ ಬಂಧನ ಕಾರ್ಯಕ್ರಮ ನಡೆಯಿತು.

ಮುಲಾರಿನ ಕಾರ್ಯಕ್ರಮದಲ್ಲಿ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ದುರ್ಗಾಪರಮೇಶ್ವರಿ ದೇವಸ್ಥಾನದ ಮೊಕ್ತೇಸರರು ಶ್ರೀ ವಾಸುದೇವ ಪ್ರಭು ಮತ್ತಿತರರು ಉಪಸ್ಥಿತರಿದ್ದರು.

ಒಟ್ಟು ವಿದ್ಯಾಸಂಸ್ಥೆಯ ವತಿಯಿಂದ ವಿವಿದೆಡೆಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ 650ಕ್ಕೂ ಹೆಚ್ಚು ಮಂದಿ ವ್ರತಧಾರಿಗಳಾಗಿ ಭಾಗವಹಿಸಿದ್ದರು.









**ಸಾಂಸ್ಕೃತಿಕ ಕಾರ್ಯಕ್ರಮ 15.8.2022:** ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ 'ಅಮೃತ ಸಿಂಚನ' – ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಸ್ವಾತಂತ್ರ್ಯ ದಿನಾಚರಣೆಯ ಮಹತ್ವ ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ನಂತರ 1ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಂದ ಶಿವಾಜಿಯ ದೃಶ್ಯರೂಪಕ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.








**ರಕ್ಷಾಬಂಧನ ಮತ್ತು ಸಂಸ್ಕೃತೋತ್ಸವ ಕಾರ್ಯಕ್ರಮ 13.08.2022:** ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದಲ್ಲಿ ರಕ್ಷಾಬಂಧನ ಕಾರ್ಯಕ್ರಮವನ್ನು ಸಂಸ್ಕೃತೋತ್ಸವದೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಮಹೇಶ್ವರ ಭಟ್ ಬರೆಪ್ಪಾಡಿ, ನಿವೃತ್ತ ಪ್ರಾಂಶುಪಾಲರು, ಶ್ರೀರಾಮ ಪದವಿ ಪೂರ್ವ ಮಹಾವಿದ್ಯಾಲಯ ಇವರು ಮಾತನಾಡಿದರು. ವಿದ್ಯಾರ್ಥಿಗಳು ಪರಸ್ಪರ ರಕ್ಷೆ ಕಟ್ಟಿಸಿಕೊಂಡು ಸಿಹಿ ತಿನ್ನಿಸುವುದರ ಮೂಲಕ ರಕ್ಷಾಬಂಧನ ಹಬ್ಬವನ್ನು ಆಚರಿಸಿಕೊಂಡರು. ಸ್ಪರ್ಧಾ ವಿಜೇತರನ್ನು ಅಭಿನಂದಿಸಲಾಯಿತು. ಸಂಸ್ಕೃತದಲ್ಲಿ ಉತ್ತಮ ಅಂಕ ಗಳಿಸಿದವರಿಗೆ ಪ್ರತಿಭಾಪುರಸ್ಕಾರ ಮಾಡಲಾಯಿತು. ವೇದಿಕೆಯಲ್ಲಿ ಸಂಚಾಲಕರು, ಸಹಸಂಚಾಲಕರು., ಪ್ರೌಢಶಾಲೆಯ ಆಡಳಿತ ಅಧಿಕಾರಿ, ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

**ಹುಟ್ಟು ಹಬ್ಬ 30–08–2022**

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಆಚರಿಸಲಾಯಿತು. ಪೂರ್ವ ಗುರುಕುಲದ ಪ್ರಮುಖರಾದ ಶ್ರೀಮತಿ ರೂಪಕಲಾ ಮಾತಾಜಿ ಹುಟ್ಟುಹಬ್ಬದ ಮಹತ್ವ, ಗೌರಿ ಪೂಜೆ, ಮತ್ತು ಗಣೇಶ ಚತುರ್ಥಿಯ ಮಹತ್ವವನ್ನು ಕಥೆ–ಯ ಮೂಲಕ ಮಕ್ಕಳಿಗೆ ಹಾಗೂ ಪಾಲಕರಿಗೆ ತಿಳಿಸಿಕೊಟ್ಟರು.

**ಶ್ರೀ ಕೃಷ್ಣ ಜನ್ಮಾಷ್ಟಮಿ– ಕೃಷ್ಣಲೋಕ 18–8–2022**

ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಸ್ನೇಹಾಂಜಲಿ ಸೇವಾ ಸಂಘದ ವತಿಯಿಂದ ನಡೆದ ಮೊಸರುಕುಡಿಕೆ ಕಾರ್ಯಕ್ರಮದಲ್ಲಿ 20 ಪುಟಾಣಿಗಳು ಶ್ರೀಕೃಷ್ಣ ಹಾಗೂ ರಾಧೆಯ ವೇಷಧಾರಿಗಳಾಗಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದರು.

**ರಕ್ಷಾಬಂಧನ 12/8/2022**

ಶ್ರೀ ಅಕ್ಕಮಹಾದೇವಿ ಶಿಶು ಮಂದಿರ ಅಜ್ಜಿಬೆಟ್ಟು ಇಲ್ಲಿ ನಡೆದ ರಕ್ಷಾಬಂಧನ ಕಾರ್ಯಕ್ರಮದಲ್ಲಿ ಶ್ರೀ ದಿವಾಕರ ಶೆಟ್ಟಿಯವರು ಕಾರ್ಯಕ್ರಮದ ಮಹತ್ವ ತಿಳಿಸಿದರು. 20 ಪೋಷಕರು ಮತ್ತು 19 ಮಕ್ಕಳು ಉಪಸ್ಥಿತರಿದ್ದರು.

ಶ್ರೀ ಗಣೇಶ ಶಿಶುಮಂದಿರ ಬೊಂಡಾಲದಲ್ಲಿ ಬಾಲಗೋಕುಲದ ಮಕ್ಕಳಿಗೆ ರಕ್ಷಾಬಂಧನ ಕಾರ್ಯಕ್ರಮ ಮಾಡಲಾಯಿತು. ಶ್ರೀಮತಿ ಶಾಂತಲಕ್ಷ್ಮಿ ರಕ್ಷಾಬಂಧನದ ಮಹತ್ವವನ್ನು ತಿಳಿಸಿಕೊಟ್ಟರು. ಒಟ್ಟು 33 ಮಕ್ಕಳು ಉಪಸ್ಥಿತರಿದ್ದರು.

ದಿನಾಂಕ 13.8.2022ರಂದು ಶಿಶುಮಂದಿರದ ಮಕ್ಕಳಿಗೆ ಮತ್ತು ಪಾಲಕರಿಗೆ ರಕ್ಷಾಬಂಧನ ಕಾರ್ಯಕ್ರಮ ಮಾಡಲಾಯಿತು.. ಶ್ರೀಮತಿ ರೇಖಾ ಮಾತಾಜಿ ರಕ್ಷಾಬಂಧನದ ಮಹತ್ವ ತಿಳಿಸಿ ಕೊಟ್ಟರು. ಒಟ್ಟು 9 ಮಕ್ಕಳು, 15 ಮಾತೆಯರು, 3 ಸಮಿತಿ ಸದಸ್ಯರು ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ

**ನಾಗರಪಂಚಮಿ : 3.8.2022**

ನಾಗರಪಂಚಮಿ ನಿಮಿತ್ತ ಶಾಲಾ ವಠಾರದಲ್ಲಿದ್ದ ನಾಗಬನದಲ್ಲಿ ನಾಗನಿಗೆ ಹಾಲು ಎರೆಯುವ ಸೇವೆ ನಡೆಯಿತು. ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ ಹಾಗೂ ಅಧ್ಯಾಪಕ ವೃಂದದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳಿಗೆ ಕು. ಪ್ರತೀಕ್ಷಾ ಮಾತಾಜಿ ನಾಗರ ಪಂಚಮಿಯ ಮಹತ್ವ ತಿಳಿಸಿಕೊಟ್ಟರು.

**ತಾಲೂಕು ಮಟ್ಟದ ಚೆಸ್ ಸ್ಪರ್ಧೆ : 6.8.2022**

ಬಿ.ಸಿ.ರೋಡ್ ತಾಲೂಕು ಕಛೇರಿಯಲ್ಲಿ ನಡೆದ ತಾಲೂಕು ಮಟ್ಟದ ಚೆಸ್ ಸ್ಪರ್ಧೆಯಲ್ಲಿ 7ನೇ ತರಗತಿಯ ವಂಶಿ ಪಿ.ಡಿ ಭಾಗವಹಿಸಿರುತ್ತಾಳೆ.

**ಜಂತು ಹುಳ ನಿವಾರಣಾ ದಿನ : 10.8.2022**

ಜಂತು ಹುಳ ನಿವಾರಣಾ ದಿನದ ಪ್ರಯುಕ್ತ ಎಲ್ಲಾ ವಿದ್ಯಾರ್ಥಿಗಳಿಗೆ ಜಂತು ಹುಳ ಮಾತ್ರೆಯನ್ನು ವಿತರಿಸಲಾಯಿತು.

**ತಾಲೂಕು ಮಟ್ಟಕ್ಕೆ ಆಯ್ಕೆ : 11.8.2022**

ಕಲ್ಲಡ್ಕ ವಲಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ 6ನೇ ತರಗತಿಯ ಆದಿತ್ಯ ದ್ವಿತೀಯ ಸ್ಥಾನ ಹಾಗೂ ಶರಣ್ಯ ಪಂಚಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಆಶಾಕಾರ್ಯಕರ್ತೆಯರೊಂದಿಗೆ ಆಚರಿಸಲಾದ ರಕ್ಷಾಬಂಧನದಲ್ಲಿ(12.8.2022)**ಮಂಗಿಲಪದವಿನ ಶಶಿಕಲಾ, ಸಜಿಪನಡುವಿನ ಆಶಾ, ಸುರಿಬೈಲ್‌ನ ಭಾರತಿ, ಕಡೇಶಿವಾಲಯದ ಸರೋಜ, ಫಜೀರಿನ ಜಯಶ್ರೀ, ವಿಟ್ಲಮುಡ್ನೂರಿನ ಉಮಾವತಿ ಶೆಟ್ಟಿ ಮತ್ತು ಶ್ಯಾಮಲಾ, ಶಂಭೂರಿನ ಪ್ರಮೀಳಾ, ಜಾರಂದಗುಡ್ಡೆಯ ಪ್ರತಿಮಾ, ಮಂಚಿಯ ನಳಿನಿ ಕಾಮತ್ ಮತ್ತು ಪುಷ್ಪಲತಾ, ಬಾಳ್ತಿಲ ಗ್ರಾಮದ ಸುಶೀಲಾ, ರೇವತಿ, ಜಯಶ್ರೀ, ನೇತ್ರಾವತಿ, ಸುಜಾತ, ಅಡ್ಯಾರಿನ ರಮಣಿ, ಕೊಳ್ನಾಡಿನ ಗೀತಾ ಪಿ, ವಿಶಾಲಾಕ್ಷಿ, ವೀರಕಂಭದ ಸುನೀತಾ, ಅಮ್ಟೂರಿನ ಬಬಿತಾ, ಪಡೀಲಿನ ಮಾಲತಿ, ಪಾಣೆಮಂಗಳೂರಿನ ಜ್ಯೋತಿಲಕ್ಷ್ಮೀ, ಹೇಮಲತಾ ಮತ್ತು ಶೋಭಾ, ನೆಟ್ಲಮುಡ್ನೂರಿನ ಸುಮಲತಾ, ಸುಜಾತ ನರಿಕೊಂಬು, ವೇದಾವತಿ ಇರಾ, ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಶಿಕ್ಷಣ ದರ್ಶಿನಿ ಬಿಡುಗಡೆ : 12.8.2022**

75ನೇ ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ಸುಭಾಷ್ ಚಂದ್ರ ಬೋಸರ 125 ಜನ್ಮ ವರ್ಷಾಚರಣೆಯ ಸವಿನೆನಪಿಗಾಗಿ 'ಶಿಕ್ಷಣ ದರ್ಶಿನಿ' ಎಂಬ ಪುಸ್ತಕವನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಬಿಡುಗಡೆ ಮಾಡಿದರು.

**ಹರ್ ಘರ್ ತಿರಂಗಾ : 13.8.2022**

ಪ್ರತಿ ವಿದ್ಯಾರ್ಥಿಗಳ ಮನೆಯ ಮೇಲೆ ರಾಷ್ಟ್ರ ಧ್ವಜ ಹಾರಿಸುವಂತೆ ಹಾಗೂ ಕುಟುಂಬ ಸಮೇತ ರಾಷ್ಟ್ರಗೀತೆ ಹೇಳುವ ವಿಡಿಯೋ ಹಾಗೂ ಫೋಟೋವನ್ನು ಅಧ್ಯಾಪಕರಿಗೆ ಕಳುಹಿಸಿ ಕೊಡಲಾಯಿತು.

**ರಾಜ್ಯಮಟ್ಟದ ಈಜು ಸ್ಪರ್ಧೆ : 14.8.2022**

ವಿ ಒನ್ ಅಕ್ವ ಸೆಂಟರ್ ವತಿಯಿಂದ ನಡೆದ ರಾಜ್ಯಮಟ್ಟದ ಈಜು ಸ್ಪರ್ಧೆಯಲ್ಲಿ 4ನೇ ತರಗತಿಯ ಅನನ್ಯ 50ಮೀ ಬ್ಯಾಕ್‌ಸ್ಟ್ರೋಕ್‌ನಲ್ಲಿ ತೃತೀಯ ಸ್ಥಾನ ಪಡೆದಿರುತ್ತಾಳೆ.

**ಮೊಸರು ಕುಡಿಕೆ ಕಬಡ್ಡಿ ಪಂದ್ಯಾಟ: 14.8.2022**

ಕಲ್ಲಡ್ಕದಲ್ಲಿ ನಡೆದ 90ನೇ ವರ್ಷದ ಮೊಸರು ಕುಡಿಕೆ ಉತ್ಸವದಲ್ಲಿ ಶ್ರೀರಾಮ ಶಾಲೆಯ ಬಾಲಕರ ಹಾಗೂ ಬಾಲಕಿಯರ ಕಬಡ್ಡಿ ತಂಡ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ವಲಯ ಮಟ್ಟದ ಪ್ರತಿಭಾ ಕಾರಂಜಿ 16.8.2022**

ವಲಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ 16 ಪ್ರಥಮ ಸ್ಥಾನ, 3 ದ್ವಿತೀಯ ಸ್ಥಾನ ಹಾಗೂ 6 ತೃತೀಯ ಸ್ಥಾನ ಪಡೆದು ಸಮಗ್ರ ಪ್ರಶಸ್ತಿಯನ್ನು ಪಡೆದಿರುತ್ತಾರೆ.

**ಜಿಲ್ಲಾ ಮಟ್ಟದ ಯೋಗ ಸ್ಪರ್ಧೆ : 20.8.2022**

ವಿದ್ಯಾಭಾರತಿ ದ.ಕ ಜಿಲ್ಲಾಮಟ್ಟದ ರಿದಮಿಕ್ ಯೋಗ ಸ್ಪರ್ಧೆಯಲ್ಲಿ 6ನೇ ತರಗತಿಯ ಕು. ಶರಣ್ಯ ತೃತೀಯ ಸ್ಥಾನ ಪಡೆದಿರುತ್ತಾಳೆ. ಗುರುನಂದನ್ ರೈ ಹಾಗೂ ಬ್ರಾಹ್ಮೀ ಭಟ್ ಪಂಚಮ ಸ್ಥಾನ ಪಡೆದಿರುತ್ತಾರೆ.

**ಟಿ.ಟಿ ಚುಚ್ಚುಮದ್ದು : 22.8.2022**

ಬಾಳ್ತಿಲ ಆರೋಗ್ಯ ಕೇಂದ್ರದ ವತಿಯಿಂದ 1 ನೇ ಹಾಗೂ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಟಿ.ಟಿ ಚುಚ್ಚುಮದ್ದನ್ನು ನೀಡಲಾಯಿತು.

**ಜಿಲ್ಲಾಮಟ್ಟದ ಜ್ಞಾನ ವಿಜ್ಞಾನ ಮೇಳ : 26.8.2022**

ವಿದ್ಯಾಭಾರತಿ ಕರ್ನಾಟಕ ವತಿಯಿಂದ ನಡೆದ ದ.ಕ ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದು, 7 ಪ್ರಥಮ ಸ್ಥಾನ, 5 ದ್ವಿತೀಯ ಸ್ಥಾನ ಹಾಗೂ 3 ತೃತೀಯ ಸ್ಥಾನ ಪಡೆದು ಒಟ್ಟು 15 ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ರಾಷ್ಟ್ರೀಯ ಕ್ರೀಡಾ ದಿನಾಚರಣೆ : 29.8.2022**

ಕ್ರೀಡಾ ದಿನಾಚರಣೆಯ ನಿಮಿತ್ತ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಮೇಜರ್ ಧ್ಯಾನ್‌ಚಂದ್ ಬಗ್ಗೆ ತಿಳಿಸಿಕೊಟ್ಟರು. ಕಛೇರಿ ಸಹಾಯಕರಾದ ಶ್ರೀ ಸುಧೀಂದ್ರ ಹಾಗೂ ಕಾವ್ಯ ಮಾತಾಜಿ ಸ್ವದೇಶಿ ಆಟಗಳನ್ನು ಆಡಿಸಿದರು.

**ತಾಲೂಕು ಮಟ್ಟಕ್ಕೆ ಆಯ್ಕೆ : 29.8.2022**

ಶ್ರೀರಾಮ ವಿದ್ಯಾಕೇಂದ್ರದಲ್ಲಿ ನಡೆದ ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರಾಥಮಿಕ ವಿಭಾಗದ ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಗೌರಿ ಹಬ್ಬದ ವಿಶೇಷತೆ : 30.8.2022**

ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಗೌರಿ ಹಬ್ಬದ ವಿಶೇಷತೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**ರಾಮಾಯಣ – ಮಹಾಭಾರತ 03.08.2022**
ರಾಮಾಯಣ ಮತ್ತು ಮಹಾಭಾರತ ಕಥೆ-ಯ ಪ್ರವಚನ ಕಾರ್ಯಕ್ರಮ ಪ್ರೌಢಶಾಲೆಯಲ್ಲಿ ಆರಂಭಗೊಂಡಿತು. ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ಕಾರ್ಯಕ್ರಮ ಉದ್ಘಾಟಿಸಿ ಶುಭ ಹಾರೈಸಿದರು. ರಾಮಾಯಣ ಕಥೆಯನ್ನು ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್ ಮತ್ತು ಮಹಾಭಾರತ ಕಥೆಯನ್ನು ಶ್ರೀ ಮಹೇಶ್ವರ್ ಭಟ್ ಬರೆಪ್ಪಾಡಿ ನಡೆಸಿಕೊಟ್ಟರು.

**ಶ್ರೀವರಮಹಾಲಕ್ಷ್ಮಿ ಹಬ್ಬದ ಮಹತ್ವ 05.08.22**
ಶ್ರೀಮತಿ ಸೌಮ್ಯ.ಪಿ ಮಾತಾಜಿ ಇವರು ಶ್ರೀ ವರಮಹಾಲಕ್ಷ್ಮಿ ಕಥೆಯನ್ನು ವಿವರಿಸಿ, ವ್ರತಾಚರಣೆಯ ಮಹತ್ವದೊಂದಿಗೆ ಶುಭಾಶಯ ತಿಳಿಸಿದರು. ವೇದಿಕೆಯಲ್ಲಿ ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು.

**ವಿಶ್ವ ಕೈ ತೊಳೆಯುವ ದಿನಾಚರಣೆ 06/08/2022**
ವಿಶ್ವ ಕೈ ತೊಳೆಯುವ ದಿನಾಚರಣೆ ಅಂಗವಾಗಿ ಮಕ್ಕಳಿಗೆ ಕೈ ತೊಳೆಯುವುದರ ಜೊತೆಗೆ ಸ್ವಚ್ಛತೆ-ಯ ಮಹತ್ವವನ್ನು ತಿಳಿಸಲಾಯಿತು.

**ಆಹಾರ ಮೇಳದಲ್ಲಿ ಭಾಗಿ 09.08.2022**
ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ ನಡೆದ "ಆಹಾರ ಮೇಳ ಆಸ್ವಾದನಮ್-2022" ರಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಅತ್ಯಂತ ಉತ್ಸುಕತೆಯಿಂದ ಪಾಲ್ಗೊಂಡರು.

**ಜಂತುಹುಳು ನಿವಾರಣಾ ದಿವಸ 10/08/2022**
ಜಂತುಹುಳು ನಿವಾರಣಾ ದಿವಸವಾಗಿ ಆಚರಿಸಲಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ವಿದ್ಯಾರ್ಥಿಗಳಿಗೆ ಜಂತುಹುಳ ಮಾತ್ರೆಯನ್ನು ನೀಡಿದರು.

**ಸಂಸ್ಕೃತೋತ್ಸವದ ಪ್ರಯುಕ್ತ ಮಕ್ಕಳಿಗೆ ವಿದ್ವಾಂಸರ ಪರಿಚಯ 09.10/8/2022**
ಸರಸ್ವತಿ ವಂದನಾ ಸಭಾದಲ್ಲಿ ವಿದ್ಯಾರ್ಥಿ ಭೂಷಣ್ ಇವರು ಸಂಸ್ಕೃತ ವಿದ್ವಾಂಸರಾದ ಮಾಡುಗುಲ ನಾಗಮಣಿ ಶರ್ಮ ಅವರ ಪಾಂಡಿತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**ವಿಜ್ಞಾನ ಮಾದರಿ ಪ್ರದರ್ಶನ 10/08/2022**
ಶಾಲಾ ಮಟ್ಟದಲ್ಲಿ ನಡೆದ ಜ್ಞಾನ-ವಿಜ್ಞಾನಮೇಳ ಸ್ಪರ್ಧೆಗಳಲ್ಲಿ ವಿಜ್ಞಾನ ಮಾದರಿ ಪ್ರದರ್ಶನ ಸ್ಪರ್ಧೆಯನ್ನು ನಡೆಸಲಾಯಿತು.

**ವಲಯ ಮಟ್ಟದ ಯೋಗಾಸನ ಸ್ಪರ್ಧೆ 11.08.22**
ಕಲ್ಲಡ್ಕ ವಲಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಪ್ರಥಮ ಗುರುಕುಮಾರ್ 9ನೇ ತರಗತಿ, ಚತುರ್ಥ ಸ್ಥಾನ ಭಾರದ್ವಾಜ್ 8 ನೇ ತರಗತಿ, ಪಂಚಮ ಸ್ಥಾನ ಧನ್ಯಶ್ರೀ 9ನೇ ತರಗತಿ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿರುತ್ತಾ-ರೆ.

**ಸಾಂಸ್ಕೃತಿಕ ಕಾರ್ಯಕ್ರಮ 15.08.2022**
ಅಮೃತಮಹೋತ್ಸವದ ಪ್ರಯುಕ್ತ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಶ್ರೀಮತಿ ಸುಧಾ ಭಟ್, ಉಪನ್ಯಾಸಕರಾದ ಶ್ರೀ ಅಶೋಕ್ ಶ್ರೀಮಾನ್, ಸಹಸಂಚಾಲಕರು, ಪ್ರೌಢಶಾಲೆಯ ಆಡಳಿತ ಅಧಿಕಾರಿ, ಮುಖ್ಯೋಪಾಧ್ಯಾಯರು, ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿ ಸಿಂಚನಾ ಹಾಗೂ ವೈಷ್ಣವಿ ನಿರೂಪಿಸಿ ಯುಕ್ತಾ ಸ್ವಾಗತಿಸಿ, ರೇಷ್ಮಾ ಧನ್ಯವಾದ ಸಮರ್ಪಿಸಿದಳು.

**ಶ್ರೀಕೃಷ್ಣ ಜನ್ಮಾಷ್ಟಮಿಯ ಮಹತ್ವ 19/08/2022**
ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಎಂ. ಇವರು ಶ್ರೀ ಕೃಷ್ಣನ ಜೀವನ ಆದರ್ಶವನ್ನು ವಿದ್ಯಾರ್ಥಿಗಳಿಗೆ ತಿಳಿಯಪಡಿಸಿದರು. ವಿದ್ಯಾರ್ಥಿಗಳಿಗೆ ಶ್ರೀಕೃಷ್ಣನ ಭಜನೆಯನ್ನು ಶ್ರೀಮತಿ ಗಾಯತ್ರಿ ಮಾತಾಜಿ ಹೇಳಿಕೊಟ್ಟರು.

**ಯೋಗಾಸನ ಸ್ಪರ್ಧೆಯಲ್ಲಿ ಪ್ರಶಸ್ತಿ 20/08/2022**
ಶ್ರೀರಾಮ ಪ್ರೌಢಶಾಲೆ ಪಟ್ಟೂರಿನಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಹದಿನೇಳರ ವಯೋಮಾನದ ಬಾಲಕರ ವಿಭಾಗದ ಯೋಗಾಸನ ಸ್ಪರ್ಧೆಯಲ್ಲಿ 9ನೇ ತರಗತಿ ಗುರುಪ್ರಸಾದ್ ಪ್ರಶಸ್ತಿಯನ್ನು ಪಡೆದಿದ್ದಾರೆ. 14ರ ವಯೋಮಾನದ ಬಾಲಕರ ವಿಭಾಗದಲ್ಲಿ ಎಂಟನೇ ತರಗತಿಯ ಭರತ್ ತೃತೀಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ

**ಜ್ಞಾನ-ವಿಜ್ಞಾನ ಮೇಳದಲ್ಲಿ ಪ್ರಶಸ್ತಿ 26.8.22**
ಇಂದ್ರಪ್ರಸ್ಥ ವಿದ್ಯಾಲಯ ಉಪ್ಪಿನಂಗಡಿಯಲ್ಲಿ ನಡೆದ ಜ್ಞಾನ-ವಿಜ್ಞಾನ ಮೇಳದಲ್ಲಿ ಬಾಲವರ್ಗದಿಂದ 24, ಕಿಶೋರವರ್ಗದಿಂದ 24 ವಿದ್ಯಾರ್ಥಿಗಳು ಭಾಗವಹಿಸಿದರು. ಒಟ್ಟು 16 ಪ್ರಶಸ್ತಿಗಳನ್ನು ಪ್ರೌಢಶಾಲೆಯ ವಿದ್ಯಾರ್ಥಿಗಳು ತಮ್ಮದಾಗಿಸಿಕೊಡಿರುತ್ತಾರೆ.

**ಜಿಲ್ಲಾ ಮಟ್ಟದ ಸ್ಕೇಟಿಂಗ್ ಸ್ಪರ್ಧೆ 26/08/2022**
ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಿದ ಜಿಲ್ಲಾಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಹದಿನೇಳರ ವಯೋಮಾನದ ಯಶಸ್ ಇನ್‌ಲೈನ್ 3ಕಿ.ಮೀ ಸರ್ಧೆಯಲ್ಲಿ ದ್ವಿತೀಯ, 1ಕಿ.ಮೀ ಸರ್ಧೆಯಲ್ಲಿ ದ್ವಿತೀಯ, 500ಮೀಟರ್ ಸ್ಪರ್ಧೆಯಲ್ಲಿ ತೃತೀಯ ಪ್ರಶಸ್ತಿಯನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಅವಿನಾಶ್ 500ಮೀಟರ್ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ.

**ತಾಲೂಕು ಮಟ್ಟಕ್ಕೆ ಆಯ್ಕೆ 29/08/2022**
ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಹದಿನೇಳರ ವಯೋಮಾನದ ಬಾಲಕ ಮತ್ತು ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಯಿತು.

**ಯಕ್ಷಗಾನ ನಾಟ್ಯ ತರಬೇತಿ** 03.08.22
ಪ್ರಥಮ ದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಇಲ್ಲಿ ವಿವೇಕಾನಂದ ವದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ.ಪ್ರಭಾಕರ ಭಟ್ ರವರು ಉದ್ಘಾಟಿಸಿದರು. ಶ್ರೀ ರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

**ರಕ್ಷಾಬಂಧನ ಆಚರಣೆ 12.08.2022**
ಶ್ರೀ ಸಂಜಯ್ ಇವರು ಈ ದಿನದ ವಿಶೇಷತೆಯ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಮತ್ತು ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

**ಭಜನೆ-ಸಾಮೂಹಿಕ ಹುಟ್ಟುಹಬ್ಬ 06.08.22**
ಜೂನ್, ಜುಲೈ, ಆಗೋಸ್ಟ್ ತಿಂಗಳಿನಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಮಾತಾಜಿಗಳು ತಿಲಕಧಾರಣೆ ಮಾಡಿ ಆರತಿ ಬೆಳಗಿ ಹರಸಿದರು.

**ವಿವಿಧ ಸ್ಪರ್ಧೆ 06.08.22**
ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ಸಂಗೀತ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಎಲ್ಲಾ ಶಿಕ್ಷಕರು ಸ್ಪರ್ಧೆಯನ್ನು ನಡೆಸಿಕೊಟ್ಟರು.

**ಅಗಸ್ತ್ಯಮುನಿಯ ಕುರಿತು ಸೆಮಿನಾರ್ 9.8.22**
ಅಗಸ್ತ್ಯಮುನಿಯ ಕುರಿತು ಅವರು ಬರೆದಿರುವಂತಹ ಅಗಸ್ತ್ಯಸಂಹಿತೆಯ ಕಿರು ಪರಿಚಯವನ್ನು ಮಾಡಿದರು. ಅದೇ ರೀತಿ ಅಗಸ್ತ್ಯ ಮುನಿಯು ಜ್ಞಾನಿ, ವಿಜ್ಞಾನಿ, ಸುಜ್ಞಾನಿ ಎಂದು ಪ್ರಖ್ಯಾತಿಯನ್ನು ಪಡೆದಿರುತ್ತಾರೆ ಎಂದು ಶ್ವೇತಾ. ಎಸ್ ಮಾತಾಜಿಯವರು ವಿದ್ಯಾರ್ಥಿಗಳಿಗೆ ವಿವರಿಸಿದರು.

**ಜಂತುಹುಳು ನಿವಾರಣಾ ಮಾತ್ರೆ ವಿತರಣೆ 10.8.22**
ಆರೋಗ್ಯ ಸಚಿವಾಲಯ ಮತ್ತು ಶಿಕ್ಷಣ ಇಲಾಖೆ ಸೂಚನೆ ಮೇರೆಗೆ ವಿದ್ಯಾರ್ಥೀಗಳಿಗೆ ಅಲ್ಬೆಂಡಜೋಲ್ ಜಂತುಹುಳು ನಿವಾರಣಾ ಮಾ

**2022-23 ರ ಜ್ಞಾನ-ವಿಜ್ಞಾನ ಮೇಳ 26.8.22**
ವಿದ್ಯಾಭಾರತಿ ಕರ್ನಾಟಕ ನಡೆಸಿದ ಜ್ಞಾನ-ವಿಜ್ಞಾನ ಮೇಳ-2022-23ರ ವತಿಯಿಂದ ನಡೆದ ಸಂಸ್ಕೃತಿಜ್ಞಾನ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ, ವೇದಗಣಿತ ರಸಪ್ರಶ್ನೆಯಲ್ಲಿ ತೃತೀಯ ಸ್ಥಾನ, ಪತ್ರವಾಚನ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮುಡಿಗೇರಿಸಿಕೊಂಡಿದ್ದಾರೆ.

**ಭೂಮಿಕಾ ಪರಿಸರ ಸಂಘ 03/08/22**

ಭೂಮಿಕಾ ಪರಿಸರ ಸಂಘದ ವತಿಯಿಂದ ವಿವಿಧ ಜಾತಿಗಳ ಗಿಡಗಳು ಹಾಗೂ ತರಕಾರಿ ಬೀಜಗಳನ್ನು ಹಾಕುವ ಪರಿಸರ ಸಂರಕ್ಷಣೆ-ಯ ಜಾಗೃತಿ ಮೂಡಿಸಲಾಯಿತು. ಪ್ರೌಢ ಶಾಲಾ ವಿಭಾಗದ ಸಹಶಿಕ್ಷಕಿ ಶ್ರೀಮತಿ ಗಾಯತ್ರಿ ಮಾತಾಜಿ ಭೂಮಿಕಾ ಪರಿಸರ ಸಂಘವನ್ನು ಉದ್ಘಾಟಿಸಿದರು.ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ, ಸಂಘದ ನಿರ್ದೇಶಕರಾದ ಜೀವಶಾಸ್ತ್ರ ಉಪನ್ಯಾಸಕರಾದ ಕು. ಮಧುಶ್ರೀ ಮಾತಾಜಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ನಿರ್ವಹಣೆಯನ್ನು ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕು. ಡೀಶಾ ಇವರು ನಿರ್ವಹಿಸಿದರು.

**ಸಂಸ್ಕೃತ ಸಪ್ತಾಹ** 10/08/22

ಭಾರವಿ ಸಂಸ್ಕೃತ ಸಂಘ ಆಯೋಜಿಸಿದ್ದ ಸಂಸ್ಕೃತ ಸಪ್ತಾಹವನ್ನು ರಾಜ್ಯ ಧಾರ್ಮಿಕ ಪರಿಷತ್ ಸದಸ್ಯರಾದ ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಇವರು ವಹಿಸಿದ್ದರು. ಉಪ ಪ್ರಾಂಶುಪಾಲರಾದ ಶ್ರೀ ತಿರುಮಲೇಶ ಪ್ರಶಾಂತ್, ದೈಹಿಕ ಶಿಕ್ಷಣ ಉಪನ್ಯಾಸಕರಾದ ಶ್ರೀ ಕರುಣಾಕರ ಶ್ರೀಮಾನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ನಿರ್ದೇಶಕರಾದ ಶ್ರೀ ಮಹೇಂದ್ರ ಮಂಜುನಾಥ್ ಭಟ್ ಮತ್ತು ಸಂಸ್ಕೃತ ಉಪನ್ಯಾಸಕರಾದ ಶ್ರೀಮತಿ ಪ್ರಸನ್ನ ಮಾತಾಜಿ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಂಸ್ಕೃತದ ಮಹತ್ವವನ್ನು ಸಾರುವ ಭಿತ್ತಿ ಬರಹಗಳನ್ನು ಅತಿಥಿಗಳ ಮೂಲಕ ಪ್ರದರ್ಶಿಸಲಾಯಿತು.

**ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆ 11/07/22**

ಪ.ಪೂ. ಶಿಕ್ಷಣ ಇಲಾಖೆ ದ.ಕ. ಜಿಲ್ಲೆ ನಡೆಸಿದ ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆಯಲ್ಲಿ 62 ಕೆಜಿ ಭಾಗದಲ್ಲಿ ಚಿನ್ನದ ಪದಕದೊಂದಿಗೆ ಪ್ರಥಮ ಸ್ಥಾನ ಪಡೆದು ಕರ್ನಾಟಕ ರಾಜ್ಯ ಸರಕಾರ ನಡೆಸುವ ರಾಜ್ಯ ಮಟ್ಟದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕರಾಟೆ ಚಾಂಪಿಯನ್ ಶಿಪ್‌ಗೆ ದ್ವಿತೀಯ ವಾಣಿಜ್ಯ ವಿಭಾಗದ ಅಭಯ್ ಕೃಷ್ಣ ಇವರು ಆಯ್ಕೆಯಾಗಿದ್ದಾರೆ.

**ರಕ್ಷಾ ಬಂಧನ ಕಾರ್ಯಕ್ರಮ 12/08/22**

ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿಟ್ಲ ತಾಲ್ಲೂಕಿನ ಸಹ ಕಾರ್ಯವಾಹರಾದ ಶ್ರೀ ಶಿವಪ್ರಸಾದ್ ಇವರು ರಕ್ಷಾ ಬಂಧನದ ಬಗ್ಗೆ ಮಾತನಾಡಿದರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಪರಸ್ಪರ ರ-ಕ್ಷೆ ಕಟ್ಟಿಸಿಕೊಂಡು ಸಿಹಿಯನ್ನು ತಿನ್ನಿಸುವುದರ ಮೂಲಕ ರಕ್ಷಾಬಂಧನ ಹಬ್ಬವನ್ನು ಆಚರಿಸಿಕೊಂಡರು.

**ವಿಕ್ರಮ್ ಸಾರಾಬಾಯಿ ಜನ್ಮದಿನಾಚರಣೆ 12.8.22**

ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ವಿಕ್ರಮ್ ಸಾರಾಬಾಯಿ ಇವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಭೌತಶಾಸ್ತ್ರ ಉಪನ್ಯಾಸಕಿ ಕುಮಾರಿ ಶ್ವೇತ ಕೆ. ಮಾತಾಜಿ ಇವರು ವಿಕ್ರಮ್ ಸಾರಾಬಾಯಿಯವರ ಜೀವನ ಚರಿತ್ರೆ ಹಾಗೂ ಸಾಧನೆಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಸಂಘದ ನಿರ್ದೇಶಕರಾದ ರಸಾಯನ ಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಶ್ವೇತ ಮಾತಾಜಿ ಹಾಗೂ ಸಂಘದ ಅಧ್ಯಕ್ಷರಾದ ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿ ರಂಜಿತ್ ಇವರು ಉಪಸ್ಥಿತರಿದ್ದರು.

**ವಿವಿಧ ಸ್ಪರ್ಧೆಗಳು 17/08/22**

ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಭಾರ್ಗವ ಕ್ರೀಡಾ ಸಂಘದ ವತಿಯಿಂದ ಮಡಕೆ ಒಡೆಯುವ ಸ್ಪರ್ಧೆ ಮತ್ತು ಆನೆಗೆ ಬಾಲ ಬಿಡಿಸುವ ಸ್ಪರ್ಧೆ ನಡೆಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀರಾಮ ಪ್ರೌಢ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಪುರುಷೋತ್ತಮ ಶ್ರೀಮಾನ್ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು.

**ವಿವಿಧ ಸ್ಪರ್ಧೆಗಳಲ್ಲಿ ಪ್ರಶಸ್ತಿ 18/08/2022**

ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಶ್ರೀರಾಮಕೃಷ್ಣ ತಪೋವನ ಪೊಳಲಿಯಲ್ಲಿ ನಡೆದ ಡ್ರಾಯಿಂಗ್ ಸ್ಪರ್ಧೆಯಲ್ಲಿ ದ್ವಿತೀಯ ವಾಣಿಜ್ಯ ವಿಭಾಗದ ಹೃಷಿಕೇಶ್ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಶಿವಾನಿ ಪ್ರಥಮ , ದ್ವಿತೀಯ ವಾಣಿಜ್ಯ ವಿಭಾಗದ ವಿಧಿಶಾ ಹಾಗೂ ವೈಷ್ಣವಿ ದ್ವಿತೀಯ , ದ್ವಿತೀಯ ವಿಜ್ಞಾನ ವಿಭಾಗದ ದೀಕ್ಷಾ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

**ಜಿಲ್ಲಾ ಮಟ್ಟದ ಕಬಡ್ಡಿ**

ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ ಇಲ್ಲಿ ನಡೆದ ವಿದ್ಯಾಭಾರತಿ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪದವಿ ಪೂರ್ವ ವಿಭಾಗದ ಬಾಲಕಿಯರ ತಂಡವು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ.

**ಭಜನಾ ಸ್ಪರ್ಧೆ 25/08/22**

ವಿದ್ಯಾರ್ಥಿಗಳಿಗಾಗಿ ನಡೆದ ಭಜನಾ ಸ್ಪರ್ಧೆಯಲ್ಲಿ 18ತಂಡಗಳು ಭಾಗವಹಿಸಿದ್ದವು. ತೀರ್ಪುಗಾರರಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್ ಪದವಿ, ತಬಲಾದಲ್ಲಿ ಜೂನಿಯರ್ ಪದವಿ ಪಡೆದಿರುವ ಶ್ರೀರಾಮ ಭಜನಾ ಮಂಡಳಿ ಕಲ್ಲಡ್ಕದ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಆಚಾರ್ಯ ಕಲ್ಲಡ್ಕ, ಶ್ರೀರಾಮ ವಸತಿ ನಿಲಯದ ವಸತಿ ಪಾಲಕರಾದ ಶ್ರೀ ಉದಯ ಸಾಲ್ಯಾನ್ ಮತ್ತು ವಾಣಿಜ್ಯ ಉಪನ್ಯಾಸಕ ಶ್ರೀ ನಾಗರಾಜ್ ಸಹಕರಿಸಿದರು.

**ಅಗ್ನಿಪಥ್-ಮಿಲಿಟರಿಯ ಮಾಹಿತಿ 25/08/22**

ದ್ವಿತೀಯ ಪಿ. ಯು .ಸಿ. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ,ಕಮಾಂಡರ್ ಶ್ರೀ ವಸಂತ ರಾವ್, ಬೆಂಗಳೂರು ,ಇವರು ಅಗ್ನಿಪಥ್ ಮತ್ತು ಮಿಲಿಟರಿಯ ಬಗ್ಗೆ ಮಾಹಿತಿ ನೀಡಿ-ದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಗಣಕ ವಿಜ್ಞಾನ ಉಪನ್ಯಾಸಕಿ ಶ್ರೀಮತಿ ಚೈತನ್ಯ ಇವರು ನಿರ್ವಹಿಸಿದರು.

**ಜ್ಞಾನ ವಿಜ್ಞಾನ ಮೇಳ 26/08/2022**

ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಲಯದಲ್ಲಿ ನಡೆದ ಜ್ಞಾನ ವಿಜ್ಞಾನ ಮೇಳದ ಸ್ಪರ್ಧೆಗಳಲ್ಲಿ ವಿಜೇತರಾದವರು 11 ಪ್ರಥಮ ಸ್ಥಾನ, 9 ದ್ವಿತೀಯ ಸ್ಥಾನಗಳನ್ನು ಪಡೆದಿದ್ದು, ವಿಜ್ಞಾನ ಮಾದರಿ, ವಿಜ್ಞಾನ ಪ್ರಬಂಧ ಮಂಡನೆ, ಗಣಿತ ಮಾದರಿ, ವೇದಗಣಿತ, ವಿಜ್ಞಾನ ಪ್ರಯೋಗ, ಸಂಸ್ಕೃತಿಜ್ಞಾನ ರಸಪ್ರಶ್ನೆಗಳು ಪ್ರಮುಖವಾಗಿವೆ.

**ಜಿಲ್ಲಾ ಮಟ್ಟದ ಭಜನಾ ಸ್ಪರ್ಧೆ 26/08/22**

ಶ್ರೀ ಶಾರದಾ ಪದವಿ ಪೂರ್ವ ಕಾಲೇಜು, ಕೊಡಿಯಾಲ್ ಬೈಲ್ ಮಂಗಳೂರು.. ಇಲ್ಲಿ ನಡೆದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಭಜನಾ ಸ್ಪರ್ಧೆಯಲ್ಲಿ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳ ತಂಡವು ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಸಂಸ್ಕೃತ ರಸಪ್ರಶ್ನೆ ಹಾಗೂ ಚುಕ್ಕಿ ರಂಗೋಲಿ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

**ಕಾರ್ಯಾಗಾರದಲ್ಲಿ ಭಾಗಿ**

ರಾಜ್ಯ ಶಿಕ್ಷಣ ಇಲಾಖೆ ನಡೆಸುವ ಕಾರ್ಯಾಗಾರದಲ್ಲಿ ಪದವಿ ಪೂರ್ವ ವಿಭಾಗದ ಭೌತಶಾಸ್ತ್ರ ಉಪನ್ಯಾಸಕಿ ಶ್ರೀಮತಿ ನಂದ ಮಾತಾಜಿ, ಇತಿಹಾಸ ಉಪನ್ಯಾಸಕ ಶ್ರೀ ರಮೇಶ್, ಸಮಾಜಶಾಸ್ತ್ರ ಉಪನ್ಯಾಸಕಿ ಶ್ರೀಮತಿ ದೀಪಿಕಾ ಮಾತಾಜಿ, ಗಣಿತ ಶಾಸ್ತ್ರ ಉಪನ್ಯಾಸಕಿ ಕುಮಾರಿ ಸ್ತುತಿ ಮಾತಾಜಿ, ಜೀವಶಾಸ್ತ್ರ ಉಪನ್ಯಾಸಕಿ ಕುಮಾರಿ ಮಧುಶ್ರೀ ಮಾತಾಜಿ, ಹಿಂದಿ ಉಪನ್ಯಾಸಕಿ ಶ್ರೀಮತಿ ಶೋಭಾ ವಿ. ಶೆಟ್ಟಿ ಮಾತಾಜಿ ಹಾಗೂ ಕನ್ನಡ ಉಪನ್ಯಾಸಕ ಶ್ರೀ ಅಶೋಕ್ ಕುಮಾರ್ ಇವರು ಭಾಗವಹಿಸಿರುತ್ತಾರೆ

**ಸಾಮೂಹಿಕ ಹುಟ್ಟುಹಬ್ಬ 30/08/22**

ದೀಪ ಪ್ರಜ್ವಲಿಸುವ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿದರು. ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ಮಾತಾಜಿಗಳು ತಿಲಕ ಧಾರಣೆ ಮಾಡಿ ಆರತಿ ಬೆಳಗಿ ಹರಸಿದರು.

**ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ 30.08.22**

ದಕ್ಷಿಣ ಕನ್ನಡ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆ ಶ್ರೀರಾಮ ಪದವಿ ಪೂರ್ವ ಕಾಲೇಜು ಕಲ್ಲಡ್ಕದಲ್ಲಿ ನಡೆದಿದ್ದು ಶ್ರೀ ಭಾರತಿ ವಿದ್ಯಾ ಸಂಸ್ಥೆ ನಂತೂರು ಮಂಗಳೂರು ಇದರ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಪ್ರತಿಮ್ ಕುಮಾರ್ ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು ವೇದಿಕೆಯಲ್ಲಿ ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್, ಯೋಗಾಸನ ತೀರ್ಪುಗಾರರಾದ ಶ್ರೀ ನವೀನ್ ಕುಮಾರ್ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಕುಮಾರ್ ವಿಜೇತರಿಗೆ ಬಹುಮಾನವನ್ನು ವಿತರಿಸಿ ಶುಭ ಹಾರೈಸಿದರು

## ಪದವಿ

**"ಜರ್ನಲಿಸ್ಟಿಕ್ ಸ್ಕಿಲ್" ಕಾರ್ಯಾಗಾರ – 1.8.22**

ಡಿಪಾರ್ಟ್ಮೆಂಟ್ ಆಫ್ ಪಿಜಿ ಸ್ಟಡೀಸ್ ಇನ್ ಎಂ.ಎ ಜರ್ನಲಿಸಂ ಮತ್ತು ಮಾಸ್ ಕಮ್ಯುನಿಕೇಶನ್, ಆಳ್ವಾಸ್ ಕಾಲೇಜು ಮೂಡಬಿದಿರೆ ಹಾಗೂ ಶ್ರೀರಾಮ ಪ್ರಥಮ ದರ್ಜೆ ಕಾಲೇಜು ಕಲ್ಲಡ್ಕ ಇವರ ಜಂಟಿ ಆಶ್ರಯದಲ್ಲಿ "ಜರ್ನಲಿಸ್ಟಿಕ್ ಸ್ಕಿಲ್" ಎಂಬ ವಿಷಯದ ಕುರಿತು ಕಾರ್ಯಾಗಾರ ನಡೆಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳು ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ನಿರೂಪಣೆ ,ಫೋಟೋಗ್ರಾಫಿ ,ಸೋಷಿಯಲ್ ಮೀಡಿಯಾ , ಸ್ಕ್ರಿಪ್ಟ್ ರೈಟಿಂಗ್ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡಿದರು. ವಿದ್ಯಾರ್ಥಿಗಳಾದ ಪ್ರತೀಕ ಸ್ವಾಗತಿಸಿ , ಸುಷ್ಮಾ ವಂದಿಸಿ , ವಿಭಾಶ್ರೀ ನಿರೂಪಿಸಿದರು.

**ಯಕ್ಷಾಮೃತ ಯಕ್ಷಗಾನ ನಾಟ್ಯ ತರಬೇತಿ ಉದ್ಘಾಟನಾ ಸಮಾರಂಭ – 03.08.22**

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು "ಯಕ್ಷಾಮೃತ" ಯಕ್ಷಗಾನ ತರಬೇತಿಯನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಅಭ್ಯಾಗತರಾಗಿ ಶ್ರೀ ಅಶೋಕ ಶೆಟ್ಟಿ ಸರಪಾಡಿ, ಕಹಳೆ ನ್ಯೂಸ್ ಕೇಬಲ್ ನೆಟ್‌ವರ್ಕ್ ಇದರ ಪ್ರಧಾನಸಂಪಾದಕರು ಹಾಗೂ ಮುಖ್ಯಸ್ಥರಾದ ಶ್ರೀ ಶ್ಯಾಮ್ ಸುದರ್ಶನ್ ಹೊಸಮೂಲೆ, ನಾಟ್ಯ ಗುರುವಾಗಿ ಕಟೀಲು ಮೇಳದ ಯಕ್ಷಗಾನ ಕಲಾವಿದ 'ಯಕ್ಷದ್ರುಮಣಿ', ಶ್ರೀ ಮೋಹನ್ ಕುಮಾರ್ ಅಮ್ಮುಂಜೆ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಪದವಿ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ ಕಾಯರ್‌ಕಟ್ಟೆ ವಹಿಸಿದ್ದರು.

**ನ್ಯಾಷನಲ್ ಲೆವೆಲ್ ಇಂಟರ್ಕಾಲೇಜಿಯೇಟ್ ಫೆಸ್ಟ್ ನಲ್ಲಿ ಸಾಧನೆ. – 08.08.22**

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿಯಲ್ಲಿ ನಡೆದ "ಎಲಿಕ್ಸರ್ "ನ್ಯಾಷನಲ್ ಲೆವೆಲ್ ಇಂಟರ್ಕಾಲೇಜಿಯೇಟ್ ಫೆಸ್ಟ್ ನಲ್ಲಿ ನಮ್ಮ ಕಾಲೇಜಿನ ದ್ವಿತೀಯ ಬಿಎಸ್ಸಿ ವಿದ್ಯಾರ್ಥಿಗಳಾದ ಅಂಕಿತ ಕೆ.ಎಂ ಹಾಗೂ ಅರ್ಪಿತಾ ಕೆ ಎಂ ಇವರು ರಂಗೋಲಿಯಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ. ಪ್ರತೀಕ್ಷಾ, ಅಂಕಿತಾ, ಅರ್ಪಿತಾ, ದಿವ್ಯಾ, ಕಾವ್ಯ, ಅಭಿನ್, ಅನ್ವಿತ್ Mad adಅಲ್ಲಿ ಭಾಗವಹಿಸಿದ್ದು ಪ್ರಥಮ ಸ್ಥಾನ ಗಳಿಸಿರುತ್ತಾರೆ. ವಿದ್ಯಾರ್ಥಿಗಳಾದ ಹೇಮಂತ್, ಅಕ್ಷಯ್, ಕೃತಿಕಾ, ಮೇಘಾಶ್ರೀ, ಆತ್ಮಿಕ, ಭವ್ಯ ಉಳಿದ ಸ್ಪರ್ಧೆಗಳಲ್ಲಿ ಭಾಗವಹಿಸಿರುತ್ತಾರೆ.

**"ಮೀಡಿಯ ವಿವೇಚನ್" ಮಾಧ್ಯಮ ಸಮ್ಮೇಳನದಲ್ಲಿ ಭಾಗಿ – 08.08.22**

ವಿವೇಕಾನಂದ ಕಾಲೇಜಿನ ಸ್ನಾತ–ಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಆಯೋಜಿಸಿದ ರಾಜ್ಯ ಮಟ್ಟದ "ಮೀಡಿಯ ವಿವೇಚನ್" ಮಾಧ್ಯಮ ಸಮ್ಮೇಳನದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ಶರಣ್ಯಾ, ಧನ್ಯ, ಪ್ರಜ್ವಲ್, ವಾಣಿಶ್ರೀ, ಸಿಂಚನ ಪಿ.ಜೆ, ಪ್ರೀತೇಶ್ ಭಾಗವಹಿಸಿರುತ್ತಾರೆ.

**ಸಂಸ್ಕೃತ ಸಪ್ತಾಹ –10.08.22**

ಶ್ರೀರಾಮ ಪ.ಪೂ ಕಾಲೇಜಿನ ಭಾರವಿ ಸಂಸ್ಕೃತ ಸಂಘ ಆಯೋಜಿಸಿದ ಸಂಸ್ಕೃತ ಸಪ್ತಾಹದಲ್ಲಿ ಪದವಿ ಕಾಲೇಜಿನ ಸಂಸ್ಕೃತ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**"VYOM 2022"ರಲ್ಲಿ ದ್ವಿತೀಯ ಸ್ಥಾನ – 12.8.22**

ವಿವೇಕಾನಂದ ಕಾಲೇಜಿನಲ್ಲಿ ನಡೆದ One day National level Intercollegiate UG Commerce fest "VYOM 2022" ರಲ್ಲಿ ಬಿಕಾಂ ವಿದ್ಯಾರ್ಥಿಗಳಾದ ಹರ್ಷಿತಾ ಹಾಗೂ ಧನ್ಯಶ್ರೀ ಹ್ಯೂಮನ್ ರಿಸೋರ್ಸ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿರುತ್ತಾರೆ. ಹಾಗೂ ವೃಷ್ಟಿ, ಕೀರ್ತಿ, ಶ್ರಾವಣಿ, ದಿಶಾ, ನಿರೀಕ್ಷಾ, ಲಾವಣ್ಯ, ಧನುಶ್ರೀ ,ಧನ್ಯಶ್ರೀ ,ಹರ್ಷಿತಾ, ಸುಶಾಂತ್ ,ಚೇತನ್ ಹಾಗೂ ಕೀರ್ತಿ ಉತ್ಸಾಹದಿಂದ ಭಾಗವಹಿಸುತ್ತಾರೆ

**"ರಕ್ಷಾಬಂಧನ" ಹಬ್ಬ ಆಚರಣೆ. –12.08.22**

ಭಾವನೆಗಳಿಗೆ ಸಂಬಂಧಿಸಿದ ಹಬ್ಬ " ರಕ್ಷಾಬಂಧನ "ರಕ್ಷೆಯ ಸಂಕೇತವಾದ ಈ ಹಬ್ಬವನ್ನು ಇಂದು ವಿದ್ಯಾರ್ಥಿಗಳು ಪರಸ್ಪರ ರಕ್ಷೆಯನ್ನು ಕಟ್ಟಿ, ಸಿಹಿ ತಿನ್ನಿಸುವ ಮೂಲಕ ಆಚರಿಸಿಕೊಂಡರು. ದಿನದ ಮಹತ್ವವನ್ನು ಪ್ರಥಮ ಬಿಕಾಂ ವಿದ್ಯಾರ್ಥಿ ಸಂಪತ್ ಕುಮಾರ್ ತಿಳಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಆಹಾರ ಮೇಳ "ಆಸ್ವಾದನಮ್"ನ ಅನಿಸಿಕೆಯನ್ನು ವ್ಯಕ್ತಪಡಿಸಿದರು.

**ಸದ್ಭಾವನಾ ದಿನ ಆಚರಣೆ –19.08.22**

ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಸದ್ಭಾವನಾ ದಿನ ಆಚರಿಸಲಾಯಿತು. ಯೋಜನಾಧಿಕಾರಿ ಶ್ರೀ ಯತಿರಾಜ್ ಪಿ. ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕು. ದೀಕ್ಷಿತಾ ಪ್ರತಿಜ್ಞಾ ವಿಧಿ ಬೋಧಿಸಿದರು. ಹಿರಿಯ ಉಪನ್ಯಾಸಕಿ ಸುಕನ್ಯಾ ಸಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಪ್ರಥಮ ವಾಣಿಜ್ಯ ವಿಭಾಗದ ಸ್ವರ್ಣ ಲಕ್ಷ್ಮಿ ಸ್ವಾಗತಿಸಿ, ಪ್ರತೀಕಾ ವಂದಿಸಿದರು.

**ಯುವ ಸ್ಪಂದನ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ವತಿಯಿಂದ ಮಾಹಿತಿ ಕಾರ್ಯಗಾರ –25.08.22**

ವಿದ್ಯಾರ್ಥಿ ಜೀವನದ ನಂತರ ಏನು? ಹೇಗೆ ಎತ್ತ ಸಾಗಬೇಕು ? ಎಂಬುದರ ಬಗ್ಗೆ ಪ್ರೇರಣಾದಾಯಕ ಮಾಹಿತಿ ಕಾರ್ಯಗಾರ ನಡೆಯಿತು.

ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ, ಯುವ ಸ್ಪಂದನ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಇದರ ಮುಖ್ಯ ಪ್ರವರ್ತಕರಾದ ಶ್ರೀ ಜಿತಿನ್‌ರವರು ವಿದ್ಯಾರ್ಥಿಗಳಿಗಾಗಿ ಯುವಸ್ಪಂದನ ಹಮ್ಮಿಕೊಂಡಿರುವ ಕೆಲವೊಂದು ಕಾರ್ಯಕ್ರಮಗಳ ರೂಪುರೇಷೆಯನ್ನು ಸ್ಪೂರ್ತಿದಾಯಕವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ವಿಶ್ವಕರ್ಮ ಸಹಕಾರ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕರು ಹಾಗೂ ಈ ಸಂಸ್ಥೆಯ ಹಿರಿಯ ವಿದ್ಯಾರ್ಥಿನಿಯಾದ ಕುಮಾರಿ ಶ್ರುತಿ, ಕಲಾವಿಭಾಗದ ಮುಖ್ಯಸ್ಥರು ಹಾಗೂ ರಾಜ್ಯಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಜಯಲಕ್ಷ್ಮಿ ಮಾತಾಜಿ ಉಪಸ್ಥಿತರಿದ್ದರು. ಅರ್ಥಶಾಸ್ತ್ರ ಉಪನ್ಯಾಸಕಿಯಾದ ಸಂಧ್ಯಾ ಮಾತಾಜಿ ಕಾರ್ಯಕ್ರಮವನ್ನು ನಿರೂಪಿಸಿ, ಸ್ವಾಗತಿಸಿ ವಂದಿಸಿದರು.

## ಶ್ರೀರಾಮ ಪದವಿ ಕಾಲೇಜಿನ ವಾರ್ಷಿಕೋತ್ಸವ ನಿಮಿತ್ತ ಪ್ರತಿಭಾ ದಿನೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ –24.08.22











ತುಳು ಚಿತ್ರರಂಗ ಹಾಗೂ ರಂಗಭೂಮಿ ಕಲಾವಿದರಾದ ಶ್ರೀ ಭೋಜರಾಜ ವಾಮಂಜೂರು ದೀಪ ಬೆಳಗಿಸಿ, ತಮ್ಮ ಬಾಲ್ಯದ ಸವಿನೆನಪುಗಳನ್ನು ಮೆಲುಕುಹಾಕಿ ವಿದ್ಯಾರ್ಥಿಗಳಿಗೆ ಸಿಕ್ಕಿದ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಹೇಗೆ ಯಶಸ್ಸಿನ ಗುರಿಯನ್ನು ತಲುಪಬಹುದು ಎಂಬುದನ್ನು ತಿಳಿಸಿದರು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಶುಭ ಹಾರೈಸಿದರು. ಮುಖ್ಯ ಅತಿಥಿಗಳಾಗಿ ಮಂಗಳೂರು ವಿ.ವಿ ಸಂಧ್ಯಾ ಕಾಲೇಜಿನ ಪ್ರಾಚಾರ್ಯರಾದ ಡಾ। ಸುಭಾಷಿಣಿ ಶ್ರೀವತ್ಸ, ತುಳು, ಕನ್ನಡ ಚಿತ್ರರಂಗ ನಾಯಕನಟ ಶ್ರೀ ಪೃಥ್ವಿ ಅಂಬಾರ್, ತುಳು ಚಿತ್ರರಂಗ ನಾಯಕ ನಟ ವಿನೀತ್, ಮಂಗಳೂರು ವಿ.ವಿ. ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ್ ಕೆ. ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಯಿತು. ವಿದ್ಯಾಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

## ಪದವಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ 'ಆಸ್ವಾದನಮ್' ಆಹಾರ ಮೇಳ – 09.08.22








ಪುಸ್ತಕದ ಜ್ಞಾನವನ್ನು ವ್ಯವಹಾರಕ್ಕೆ ತರುವ ಉದ್ದೇಶದಿಂದ ವಿದ್ಯಾರ್ಥಿಗಳು, ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ಆಹಾರ ಮೇಳ. ಇದರಲ್ಲಿ 32 ಸ್ಟಾಲ್‌ಗಳಲ್ಲಿ 200ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡು ವೈವಿಧ್ಯಮಯ ತಿನಿಸುಗಳಾದ ಪಕೋಡ, ಸಿಹಿತಿಂಡಿ, ಆಷಾಢ ವಿಶೇಷ, ವಿವಿಧ ಬಗೆಯ ಚಿಪ್ಸ್, ಜ್ಯೂಸ್, ದೋಸಾ ಐಟಮ್ಸ್, ಸ್ನಾಕ್ಸ್ ಮುಂತಾದ ಸುಮಾರು 125ಕ್ಕೂ ಹೆಚ್ಚು ಖಾದ್ಯಗಳನ್ನು ತಯಾರಿಸಿ ಮಾರಾಟಕ್ಕೆ ಇರಿಸಿದ್ದರು. ವಿದ್ಯಾಕೇಂದ್ರದ 3000 ವಿದ್ಯಾರ್ಥಿಗಳು ಇದರ ಗ್ರಾಹಕರು. ಒಟ್ಟು 1,60,000/– ವಹಿವಾಟು ನಡೆಸಿದ ಈ ಮೇಳವನ್ನು ವಾಮದಪದವು ಉದ್ಯಮಿ ಶ್ರೀ ವರದರಾಜ ಟಿ. ಪೈಯವರು ಮೊಸರು ಕಡೆಯುವ ಮೂಲಕ ಸಾಂಪ್ರದಾಯಿಕವಾಗಿ ಉದ್ಘಾಟಿಸಿದರು. ಭಟ್ & ಭಟ್ ಖ್ಯಾತಿಯ ಮನೋಹರ ಭಟ್ ಮತ್ತು ಸುದರ್ಶನ ಭಟ್ ಬೆದ್ರಾಡಿ ಶುಭ ಹಾರೈಸಿದರು. ಪದವಿ ವಿಭಾಗದ ಪ್ರಿನ್ಸಿಪಾಲ್ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಸ್ವಾಗತಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ಸಂಧ್ಯಾಕುಮಾರಿ ಎಸ್. ವಿಟ್ಲ ವಂದಿಸಿ ರಾಜ್ಯಶಾಸ್ತ್ರ ಉಪನ್ಯಾಸಕಿ ಜಯಲಕ್ಷ್ಮೀ ಕಾರ್ಯಕ್ರಮ ನಿರೂಪಿಸಿದರು. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀರಾಮ ವಿದ್ಯಾ–ಕೇಂದ್ರದ ಸಂಚಾಲಕ ವಸಂತ ಮಾಧವ, ಡಾ. ಕಮಲಾ ಪ್ರಭಾಕರ ಭಟ್ ಉಪಸ್ಥಿತರಿದ್ದರು.




**ಸ್ವಾತಂತ್ರ್ಯ ಅಮೃತ ಮಹೋತ್ಸವದ ಸರಣಿ ಕಾರ್ಯಕ್ರಮ –11.08.22**

ಮಂಗಳೂರು ವಿಶ್ವವಿದ್ಯಾನಿಲಯ ತುಳು ಅಧ್ಯಯನ ಪೀಠ, ಕೊಂಕಣಿ ಅಧ್ಯಯನ ಪೀಠ ಮತ್ತು ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ವತಿಯಿಂದ ನಡೆದ ಸರಣಿ ಕಾರ್ಯಕ್ರಮ




**ಯಕ್ಷಾಮೃತ – 03.08.22 :** ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು "ಯಕ್ಷಾಮೃತ" ಯಕ್ಷಗಾನ ತರಬೇತಿಯನ್ನು ಉದ್ಘಾಟಿಸಿದರು. ಮುಖ್ಯ ಅಭ್ಯಾಗತರಾಗಿ ಶ್ರೀ ಅಶೋಕ ಶೆಟ್ಟಿ ಸರಪಾಡಿ, ಶ್ರೀ ಮೋಹನ್ ಕುಮಾರ್ ಅಮ್ಮುಂಜೆ, ಶ್ರೀ ಶ್ಯಾಮಸುದರ್ಶನ ಉಪಸ್ಥಿತರಿದ್ದರು.




**"ಲೀಗಲ್ & ಕಮಿಟಿ " ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಾಗಾರ. –16.08.22**

ವಿವೇಕಾನಂದ ಕಾನೂನು ವಿದ್ಯಾಲಯ ಪುತ್ತೂರು ಇವರಿಂದ ನೈಜ ಚಿತ್ರಣವನ್ನು ಪ್ರಾತ್ಯಕ್ಷಿಕವಾಗಿ ತೋರಿಸುವ ಮೂಲಕ ವಿದ್ಯಾರ್ಥಿಗಳಿಗೆ ಕಾನೂನಿನ ಮಾಹಿತಿಯನ್ನು ನೀಡಿದರು.

## ಆಜಾದ್ ಭವನ ಉದ್ಘಾಟನೆ – ದೀಪಪ್ರದಾನ 26.08.22



















ಪದವಿ ವಿಭಾಗದಲ್ಲಿ ಹೊಸದಾಗಿ ನಿರ್ಮಿಸಲಾದ ಸಭಾಂಗಣ "ಆಜಾದ್ ಭವನ"ವನ್ನು ಪುಣೆಯ ಮಕ್ಕಳ ತಜ್ಞ ಡಾ.ಸುಧಾಕರ ಶೆಟ್ಟಿ ಉದ್ಘಾಟಿಸಿದರು. ಅಂದು ಅಂತಿಮ ಪದವಿ ವಿದ್ಯಾರ್ಥಿಗಳ ದೀಪಪ್ರದಾನ ಕಾರ್ಯಕ್ರಮವನ್ನು ಜೊತೆಯಾಗಿ ನಡೆಸಿದ್ದು, ಡಾ.ಪ್ರಭಾಕರ ಭಟ್ ಕಲ್ಲಡ್ಕ, ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಯಾದ ಮಣಿವಣ್ಣನ್ ಪಿ., ಭಟ್ಕಳ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಸುನೀಲ್ ನ್ಯಾಕ್, ಉದ್ಯಮಿಗಳಾದ ಬೆಂಗಳೂರಿನ ಶ್ರೀ ಕೃಷ್ಣಮೂರ್ತಿ, ಉಜಿರೆಯ ಶ್ರೀ ಕೆ.ಮೋಹನ್ ಕುಮಾರ್, ಶ್ರೀ ಬಾಲಕೃಷ್ಣ ಭಂಡಾರಿ, ಹಿಂ. ವ. ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಶ್ಮಿ ಎಸ್.ಆರ್., ಶ್ರೀ ಸುಮುಖ್ ಬೆಟಗೇರಿ ಹಾಗೂ ವಿದ್ಯಾಕೇಂದ್ರದ ಹಿರಿಯರು, ಆಡಳಿತ ಮಂಡಳಿ ಸದಸ್ಯರು, ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

## ಸಿ.ಎ ಫೌಂಡೇಶನ್ ಪರೀಕ್ಷೆಯಲ್ಲಿ ಉತ್ತೀರ್ಣ



ಶ್ರೀರಾಮ ಪದವಿ ಕಾಲೇಜಿನ 2nd ಬಿಕಾಂ ವಿದ್ಯಾರ್ಥಿ ಯಕ್ಷಿತ್ ಇವರು ತಮ್ಮ ಪ್ರಥಮ ಪ್ರಯತ್ನದಲ್ಲೇ ವಿದ್ಯಾಭ್ಯಾಸದ ಜೊತೆಗೆ ಸಿ.ಎ ಫೌಂಡೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಸಂಸ್ಥೆಯ ಹಿರಿಯರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಇವರು ಶಾಲು ಹೊದಿಸಿ ಅಭಿನಂದಿಸಿದರು.

## ಉಚಿತ ಸಮವಸ್ತ್ರ ವಿತರಣೆ : 20.8.2022



ವಿದ್ಯಾಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುವ ಮಾತೆಯರಿಗೆ ಸಂಸ್ಥೆಯ ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ಉಚಿತ ಸಮವಸ್ತ್ರ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕರು, ವಿಭಾಗ ಮುಖ್ಯಸ್ಥರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



**ಪೋಷಕರ ಸಭೆ 23.08.2022**

ಪೋಷಕರ ಸಭೆಯಲ್ಲಿ 10ನೇ ತರಗತಿಯ 273, 9ನೇ ತರಗತಿಯ 246, 8ನೇ ತರಗತಿಯ 267 903 ಮಕ್ಕಳ ಸಂಖ್ಯೆಯಲ್ಲಿ 786 ಪೋಷಕರು ಉಪಸ್ಥಿತರಿದ್ದರು. ಡಾ ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು.



**ವಲಯ ಕಬಡ್ಡಿ ಪಂದ್ಯಾಟ ಮತ್ತು ರಾಷ್ಟ್ರೀಯ ಕ್ರೀಡಾ ದಿನಾಚರಣೆ 29/08/2022**

ಶ್ರೀ ಸನತ್.ರೈ ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ವಿಷ್ಣು ಹೆಬ್ಬಾರ್, ತಾ.ದೈ.ಶಿ. ಪರಿವೀಕ್ಷಕರು, ಸಂಚಾಲಕರು, ಮುಖ್ಯೋಪಾಧ್ಯಾಯರು, ಉಪಸ್ಥಿತರಿದ್ದರು.



**ಡ್ರೋನ್ ಕ್ಯಾಮರಾದ ಪ್ರಾತ್ಯಕ್ಷಿಕೆ 30/08/2022**

ಅಟಲ್‌ಟಿಂಕರಿಂಗ್ ಲ್ಯಾಬ್‌ನಲ್ಲಿ ಡ್ರೋನ್ ಕ್ಯಾಮರಾದ ಬಗ್ಗೆ ಕಾರ್ಯಗಾರ ಹಾಗೂ ಪ್ರಾತ್ಯಾಕ್ಷಿಕೆ ನಡೆಯಿತು. ಹಿರಿಯರಾದ ಡಾ। ಪ್ರಭಾಕರ ಭಟ್, ವಿಭಾಗ ಪ್ರಮುಖರು, ಲ್ಯಾಬ್‌ನ ಪ್ರಮುಖರಾದ ಶ್ರೀಮತಿ ರೋಹಿಣಿ ಉಪಸ್ಥಿತರಿದ್ದರು.

## ಸೆಕೆಂಡರಿ ಸ್ಕೂಲ್



**ಹರ್ ಘರ್ ತಿರಂಗಾ 12.08.2022**

ಮನೆಮನೆಯಲ್ಲೂ ತ್ರಿವರ್ಣ ಧ್ವಜ ಹಾರಿಸುವ ಅಭಿಯಾನಕ್ಕೆ ಸಂಭ್ರಮ ಉತ್ಸಾಹಗಳಿಂದ ಚಾಲನೆ ನೀಡಿದ ಶ್ರೀ ರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳು .



**ಹಾವು ಮತ್ತು ನಾವು 22/08/2022**

ಉರಗ ತಜ್ಞರಾದ ಶ್ರೀ ಕಿರಣ್ ಮತ್ತು ತೇಜಸ್ ಹಾವುಗಳ ಬಗ್ಗೆ ವಿವರಿಸಿದರು. ಶ್ರೀ ರಾಮ ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ. ಪ್ರಭಾಕರ್ ಭಟ್, ಉಪಪ್ರಂಶುಪಾಲರು ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಇವರು ಉಪಸ್ಥಿತರಿದ್ದರು.



**ಪೋಷಕರ ಸಭೆ 29–08–2022**

ಪೋಷಕರ ಅಭಿಪ್ರಾಯದ ಬಳಿಕ ಡಾ.ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. ವಿದ್ಯಾ–ಕೇಂದ್ರದ ಅಧ್ಯಕ್ಷರು, ಸಂಚಾಲಕರು, ಉಪಪ್ರಾಂಶುಪಾಲರು ಉಪಸ್ಥಿತರಿದ್ದರು.

## ಪದವಿ ಪೂರ್ವ



**ಆಜಾದಿ ಕಾ ಅಮೃತ್ ಮಹೋತ್ಸವ್ ಪ್ರಯುಕ್ತ ಸಾಂಸ್ಕೃತಿಕ ಸ್ಪರ್ಧೆಗಳು 10.08.22**

ಕಾರ್ಯಕ್ರಮದ ನಿಮಿತ್ತ ದೇಶಭಕ್ತಿ ಗೀತೆ, ರಂಗೋಲಿ ಸ್ಪರ್ಧೆ, ಕೃಷ್ಣಾರ್ಪಣಂ, ಮತ್ತು ಭಕ್ತಿ ಗೀತೆ ಸ್ಪರ್ಧೆಗಳು ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ನಡೆಸಲಾಯಿತು.



**75ನೇ ಸ್ವಾತಂತ್ರ್ಯ ದಿನಾಚರಣೆ 15.08.2022**

ಭಗೀರಥ ಮಾನವಿಕ ಸಂಘದ ವತಿಯಿಂದ 75ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಶ್ರೀ ಪ್ರಸಾದ್ ಕುಮಾರ್, ನ್ಯಾಯವಾದಿಗಳು ಬಿ. ಸಿ. ರೋಡ್ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ಪ್ರಾಂಶುಪಾಲರು ಉಪಸ್ಥಿತರಿದ್ದರು.



**ಟೇಬಲ್ ಟೆನಿಸ್ ಸ್ಪರ್ಧೆ**

ಶ್ರೀ ಸತ್ಯ ಸಾಯಿ ಲೋಕ ಸೇವಾ ವಿದ್ಯಾಸಂಸ್ಥೆ ಅಳಿಕೆಯಲ್ಲಿ ನಡೆದ ಬಂಟ್ವಾಳ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಹುಡುಗರ ಮತ್ತು ಹುಡುಗಿಯರ ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ



**ಖೋ–ಖೋ ಸ್ಪರ್ಧೆ 19.08.2022**

ಶ್ರೀದೇವಿ ವಿದ್ಯಾಸಂಸ್ಥೆ, ಪುಣಚ, ಬಂಟ್ವಾಳ ಇಲ್ಲಿ ನಡೆದ ವಿದ್ಯಾಭಾರತಿ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ತರುಣ ವರ್ಗದ kho kho ಸ್ಪರ್ಧೆಯಲ್ಲಿ ಹುಡುಗರ ತಂಡ ದ್ವಿತೀಯ ಸ್ಥಾನ ಪಡೆದಿದೆ.



**ಹಾವುಗಳ ಕುರಿತು ಮಾಹಿತಿ 22/08/22**

ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ಹಾವುಗಳ ಕುರಿತು ಮಾಹಿತಿಯನ್ನು ಉರಗ ತಜ್ಞರಾದ ಶ್ರೀ ಗೇವಿಯರ್ ಕಿರಣ್ ಪಿಂಟೋ ಮತ್ತುಶ್ರೀ ತೇಜಸ್ ಕಲ್ಲಡ್ಕ ಇವರುಗಳು ಹಾವುಗಳ ವೈಶಿಷ್ಟತೆಗಳ ಬಗ್ಗೆ ಮಾಹಿತಿ ನೀಡಿದರು.



**ಕಿರು ಪ್ರವಾಸ 27.08.22** ಇತಿಹಾಸ ಸ್ಮಾರಕಗಳ ಅಧ್ಯಯನದ ಕಿರು ಪ್ರವಾಸ–ಸಾವಿರ ಕಂಬ ಬಸದಿ, ಕಾರ್ಕಳ ಗೊಮ್ಮಟೇಶ್ವರ, ಕೋಟಿ ಚೆನ್ನಯ್ಯ ಮ್ಯೂಸಿಯಂ ಮಣಿಪಾಲ, ಸಾಲು ಮರಗಳ ತಿಮ್ಮಕ್ಕ ಉದ್ಯಾನವನಗಳಿಗೆ ಭೇಟಿ.

## ಶ್ರೀರಾಮ ಮಂದಿರ ಕಲ್ಲಡ್ಕದ ಮೊಸರುಕುಡಿಕೆ ಉತ್ಸವದಲ್ಲಿ ಭಾಗಿಗಳಾದ ಶ್ರೀರಾಮ ವಿದ್ಯಾಕೇಂದ್ರದ ಪುಟಾಣಿಗಳು – 19.08.2022





ಶಿಶುಮಂದಿರದ 181 ಶಿಶುಗಳು, 1ರಿಂದ 4ನೇ ತರಗತಿಯ 492 ವಿದ್ಯಾರ್ಥಿಗಳು ರಾಧೆ–ಕೃಷ್ಣ ವೇಷಧರಿಸಿ 90ನೇ ವರ್ಷದ ಮೊಸರು ಕುಡಿಕೆಯ ಮೆರವಣಿಗೆಯಲ್ಲಿ ಭಾಗವಹಿಸಿದರು.



## ಶ್ರೀಕೃಷ್ಣಲೋಕ




ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ
ರಾಮ ನಗರ ಶಾಖೆಯಲ್ಲಿ
E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ,
ಮಾಜಿ ಯೋಧರಿಗೆ ಮತ್ತು
ವಿಧವೆಯರಿಗೆ 0.5%
ಬಡ್ಡಿ ಹೆಚ್ಚಿಗೆ ನೀಡಲಾಗುವುದು



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

KARKAN/2014/62363
Posted at Kalladka P.O.
on 10th and 15th of
Every month

Vol. : 9 Issue : 4 Rs. 10/-



SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.srvk.org E-mail : info@srvk.org


BOOK POST

ಸವಿಧೇ,


Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363